**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ:-2023-24ನೇ ಸಾಲಿನ ಲೆಕ್ಕಶೀರ್ಷಿಕೆ 5054 ರಡಿಯಲ್ಲಿ ಸೆಪ್ಟಂಬರ್ 2023ರ ಮಾಹೆಗೆ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:-ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಡಿಸಿಎಲ್) ರವರ ಪತ್ರ ಸಂಖ್ಯೆ. ವ್ಯನಿ/ಕರಅನಿನಿ/ಲೆಶಾ/ಅನುದಾನ/ 2023-24/1565, ದಿನಾಂಕ: 19-09-2023.

****

**ಪ್ರಸ್ತಾವನೆ:-**

2023-24 ನೇ ಸಾಲಿನ ಆಯವ್ಯಯದ 5054 ರಸ್ತೆ ಮತ್ತು ಸೇತುವೆಗಳ ಮೇಲಿನ ಬಂಡವಾಳ ವೆಚ್ಚದಡಿ ಸಂಪುಟ-7, ಅಭಿಯಾಚನೆ ಸಂಖ್ಯೆ. 20 ರಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಲೆಕ್ಕ ಶೀರ್ಷಿಕೆ 5054-80-190-0-01-132 ಬಂಡವಾಳ ವೆಚ್ಚಗಳ ಅಡಿಯಲ್ಲಿ ರೂ.50000.00 ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಅದರಂತೆ, ಇದರಲ್ಲಿ ಪ್ರತಿ ತಿಂಗಳು 1/12 ರಂತೆ ಆಗಸ್ಟ್ 2023 ರ ಮಾಹೆವರೆಗೆ ಒಟ್ಟು ರೂ.20833.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು, ರೂ.29167.00 ಲಕ್ಷಗಳು ಬಾಕಿ ಉಳಿದಿರುತ್ತದೆ.

ನಿಗಮದಿಂದ ಕೈಗೊಂಡಿರುವ ಮುಂದುವರೆದ ಕಾಮಗಾರಿಗಳು / ಭೂಸ್ವಾಧೀನ ಪ್ರಕರಣಗಳಿಗೆ ಹಾಗೂ ಹಂತವಾರು ಸೇತುವೆಗಳು ಪ್ರಗತಿಯಲ್ಲಿದ್ದು, ಯೋಜನಾ ಕಛೇರಿಯಲ್ಲಿ ವಿವಿಧ ಹಂತದಲ್ಲಿನ ಕಾಮಗಾರಿಗಳು ಸೇರಿದಂತೆ ಒಟ್ಟಾರೆ ಬಾಕಿ ಬಿಲ್‌ಗಳ ಮೊತ್ತ ರೂ.145.00 ಕೋಟಿಗಳು ಇರುತ್ತದೆ ಎಂದು ಹಾಗೂ ಸದರಿ ಬಿಲ್‌ಗಳನ್ನು ಆದ್ಯತೆ ಮೇರೆಗೆ ತೀರುವಳಿ ಮಾಡಬೇಕಾಗಿರುತ್ತದೆ ಎಂದು ತಿಳಿಸುತ್ತಾ, ಸಾರ್ವಜನಿಕ ಸುಗಮ ಸಂಚಾರಕ್ಕಾಗಿ ಹಾಗೂ ನಿಗದಿತ ಅವಧಿಯಲ್ಲಿ ಕಾಮಗಾರಿಗಳ ಪ್ರಗತಿಯನ್ನು ಸಾಧಿಸಲು ಮತ್ತು "Working Season" ಅವಧಿಯಲ್ಲಿ ಕಾಮಗಾರಿ ಬಿಲ್ಲುಗಳನ್ನು ತ್ವರಿತಗತಿಯಲ್ಲಿ ಪಾವತಿಸಿದಲ್ಲಿ ಹೆಚ್ಚಿನ ಭೌತಿಕ ಹಾಗೂ ಆರ್ಥಿಕ ಪ್ರಗತಿ ಸಾಧಿಸಲು ಅನುಕೂಲವಾಗುತ್ತದೆ ಮತ್ತು ವಿವಿಧ ಹಂತದ ಸೇತುವೆಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಭೂಸ್ವಾಧೀನ ಪರಿಹಾರ ಪಾವತಿಗಾಗಿ ಕೋರಿರುವ ಅನುದಾನ ಬಿಡುಗಡೆ ಅತ್ಯವಶ್ಯಕವಾಗಿರುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ತಿಳಿಸಿರುತ್ತಾರೆ.

ಆದಕಾರಣ, 2023-24ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 5054-80-190-0-01-132 ರಡಿ ಬಂಡವಾಳ ವೆಚ್ಚಗಳಡಿ ನಿಗಮಕ್ಕೆ ಹಂಚಿಕೆ ಮಾಡಿರುವ ರೂ.50000.00 ಲಕ್ಷಗಳ ಅನುದಾನದಲ್ಲಿ ನಿಗಮಕ್ಕೆ ಸೆಪ್ಟಂಬರ್-2023 ರ ಮಾಹೆಗೆ ಒಟ್ಟು ರೂ.4167.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಓದಲಾದ ಪತ್ರದಲ್ಲಿ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರದಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಈ ಕೆಳಕಂಡಂತೆ ಆದೇಶ.

. . . . . 2

**ಸರ್ಕಾರದ ಆದೇಶ ಸಂಖ್ಯೆ; ಲೋಇ ಇ-157 ಇಎಪಿ 2023 ಬೆಂಗಳೂರು, ದಿನಾಂಕ: 25-09-2023**

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ರಸ್ತೆ ಮತ್ತು ಸೇತುವೆಗಳ ಮುಂದುವರೆದ ಕಾಮಗಾರಿಗಳ ಬಿಲ್ಲುಗಳ ಪಾವತಿಗಾಗಿ (ಶೇ.75% ರಷ್ಟು) ಹಾಗೂ ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ (ಶೇ.25% ರಷ್ಟು) ಪರಿಹಾರ ಪಾವತಿಸಲು 2023-24 ನೇ ಸಾಲಿನ ಲೆಕ್ಕ ಶೀರ್ಷಿಕೆ 5054-80-190-0-01-132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಪ್ರಸ್ತುತ ಖಜಾನೆ-2 ರಲ್ಲಿ ಲಭ್ಯವಿರುವಂತೆ ಸೆಪ್ಟಂಬರ್-2023 ರ ಮಾಹೆಗೆ ಒಟ್ಟು ರೂ.4167.00 ಲಕ್ಷಗಳನ್ನು (ನಲವತ್ತೊಂದು ಕೋಟಿ ಅರವತ್ತೇಳು ಲಕ್ಷ ರೂಪಾಯಿಗಳು ಮಾತ್ರ) ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಹಣ ಬಿಡುಗಡೆ ಮಾಡಲಾಗಿದೆ. ಸದರಿ ಮೊತ್ತದಲ್ಲಿ ರಸ್ತೆ ಮತ್ತು ಸೇತುವೆಗಳ ಮುಂದುವರೆದ ಕಾಮಗಾರಿಗಳ ಬಿಲ್ಲುಗಳ ಪಾವತಿಗಾಗಿ ಶೇ.75% ರಷ್ಟು ಹಾಗೂ ಭೂಸ್ವಾಧೀನ ಪ್ರಕರಣಗಳಿಗೆ ಸಂಬಂಧಿಸಿದಂತೆ ಶೇ.25% ರಷ್ಟು ಪರಿಹಾರ ಪಾವತಿಸುವಂತೆ ತಿಳಿಸಲಾಗಿದೆ.

ಹೀಗೆ ಬಿಡುಗಡೆ ಮಾಡಲಾದ ಹಣವನ್ನು ಡ್ರಾ ಮಾಡಲು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ರವರು ಸಹಾಯಾನುದಾನ ಸ್ವೀಕರ್ತನ ರಸೀದಿ (Grant in Aid Payee receipt) ಬಿಲ್ಲನ್ನು ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ ಇವರಿಗೆ ಸಲ್ಲಿಸಿ ಮೇಲುರುಜು ಮಾಡಿಸಿ, ಈ ಸ್ವೀಕರ್ತ ರಸೀದಿಯನ್ನು ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಗೆ ಸಲ್ಲಿಸಿ ಡ್ರಾ ಮಾಡತಕ್ಕದ್ದು.

ಈ ಹಣ ಬಿಡುಗಡೆ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 07 ಟಿಎಫ್‌ಪಿ 2023, ದಿನಾಂಕ 31-07-2023 ರಲ್ಲಿ ಸಹಮತಿಸಿರುವಂತೆ ಆಡಳಿತ ಇಲಾಖೆಯ ಕಾರ್ಯದರ್ಶಿ ರವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದ ಮೇರೆಗೆ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**

(ಹರ್ಷ ಬಿ.ಎಂ) 25/09/2023
ಸರ್ಕಾರದ ಅಧೀನ ಕಾರ್ಯದರ್ಶಿ (ಇಎಪಿ)
ಲೋಕೋಪಯೋಗಿ ಇಲಾಖೆ

**ಪ್ರತಿಯನ್ನು :-**

1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
5. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
7. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, (ಲೋಕೋಪಯೋಗಿ ಆರ್ಥಿಕ ಕೋಶ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
8. ಜಂಟಿ ನಿರ್ದೇಶಕರು, ಸ್ಟೇಟ್ ಹುಜೂರ್ ಟ್ರೆಷರಿ, ಕೆ.ಆರ್.ಸರ್ಕಲ್, ಬೆಂಗಳೂರು.
9. ಜಂಟಿ ನಿರ್ದೇಶಕರು, ಟಿ.ಎನ್.ಎಮ್.ಸಿ ಖನಿಜ ಭವನ, ಬೆಂಗಳೂರು.
10. ಮುಖ್ಯ ಇಂಜಿನಿಯರ್, PRAMC, ಲೋಕೋಪಯೋಗಿ ಇಲಾಖೆ, ಕೆಆರ್ ವೃತ್ತ, ಬೆಂಗಳೂರು ರವರಿಗೆ ವೆಬ್ ಸೈಟ್ನಲ್ಲಿ ಪ್ರಕಟಿಸಲು.
11. ಹೆಚ್ಚುವರಿ ಪ್ರತಿಗಳು.